ಕರ್ನಾಟಕ ಸರ್ಕಾರ
ಉಪತಹಶೀಲ್ದಾರರವರ ನ್ಯಾಯಾಲಯ
ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

ಸಂ/ಕಂ/ಪಹಣಿ/ವಿವಾದ/51/2015-16 ದಿ: 25.4.2016

ಉಪಸ್ಥಿತರು :- ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

**ವಾದಿಗಳು :**

**1) ಶ್ರೀ ಸೋಮನಗೌಡ ತಂದೆ ದಿ॥ ಕೊಟ್ರಗೌಡ**

**2) ಶ್ರೀ ಸಣ್ಣ ಬಸವನಗೌಡ ತಂದೆ ದಿ॥ ಕೊಟ್ರಗೌಡ**

**3) ಶ್ರೀ ವೃಷಭೇಂದ್ರಗೌಡ ತಂದೆ ದಿ॥ ಕೊಟ್ರಗೌಡ**

**ಗ್ರಾಮ : ಸಕ್ರಿಹಳ್ಳಿ.**

**ಪ್ರತಿವಾದಿಗಳು :**

**1) ಶ್ರೀ ಸೋಮನಗೌಡ ತಂದೆ ದಿ॥ ಕೊಟ್ರಗೌಡ**

**2) ಜಿ.ಸಣ್ಣ ಬಸವನಗೌಡ ತಂದೆ ದಿ॥ ಕೊಟ್ರಗೌಡ**

**ಗ್ರಾಮ : ಸಕ್ರಿಹಳ್ಳಿ**

**ವಿಷಯ :- ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಅಡವಿ ಕ್ಯಾದಿಗಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 145/1 ವಿಸ್ತೀರ್ಣ 00-60 ಎಕರೆ ಜಮೀನು ಅಣ್ಣ ತಮ್ಮಂದಿರು ಮಾಡಿಕೊಂಡ ಪಾಲು ವಿಭಾಗದ ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು-ವಿಚಾರಣೆ.**

**ಪೀಠಿಕೆ :-**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಅಡವಿಕ್ಯಾದಿಗಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 145/1 ವಿಸ್ತೀರ್ಣ 00-60 ಎಕರೆ ಜಮೀನನ್ನು ವಾದಿಗಳು 1 ರಿಂದ 3 ರವರೆಗಿನ ಅಣ್ಣ ತಮ್ಮಂದಿರು ಪಾಲುವಿಭಾಗದ ಪ್ರಕಾರ ಮೋಜಣಿ ಇಲಾಖೆಯವರಿಂದ 11-ಇ ನಕ್ಷೆ ಹೊಂದುತ್ತಾ ಹಕ್ಕು ಬದಲಾವಣೆ ಮಾಡಿಕೊಡಲು ತಾಲೂಕಾ ಭೂಮಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಈ ಪ್ರಕಾರ ಭೂಮಿ ಕೇಂದ್ರದಲ್ಲಿ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ವಹಿವಾಟು ಸಂಖ್ಯೆ 52/2015-16 ಹಾಗೂ ಹಕ್ಕು ಬದಲಾವಣೆ ಸಂಖ್ಯೆ ಹೆಚ್-20/2015-16 ರ ಪ್ರಕಾರ ಕ್ರಮ ವಹಿಸುತ್ತಾ ಹಕ್ಕು ಬದಲಾವಣೆ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಹೋಬಳಿ ಇವರ ದ್ವಾರ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಗ್ರಾಮ ಲೆಕ್ಕಾಧಿಕಾರಿ ಅಡವಿಕ್ಯಾದಿಗಿಹಳ್ಳಿ ಇವರ ಮುಖಾಂತರ ಜಾರಿ ಮಾಡಿರುತ್ತಾರೆ. ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಲಾಗಿ ಪ್ರತಿವಾದಿಗಳು ತಮ್ಮ ತಕರಾರನ್ನು ಭೂಮಿ ಕೇಂದ್ರದಲ್ಲಿ ಸ್ವೀಕೃತಿ ಸಂಖ್ಯೆ 5146/2015-16 ರಂತೆ ದಾಖಲು ಮಾಡಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 21-03-2016

12/05/16

ರಿಂದ ದಿನಾಂಕ: 05-05-2016 ರವರೆಗೆ ವಿಚಾರಣೆ ನಡೆಸಲಾಯಿತು ಹಾಗೂ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

ವಾದಿಗಳು ಹಾಜರುಪಡಿಸಿರುವ ವಂಶವೃಕ್ಷ ಪರಿಶೀಲಿಸಲಾಗಿ ವಾದಿ ಹಾಗೂ ಪ್ರತಿವಾದಿಗಳು ಮೂರು ಜನರು ಒಂದೇ ಒಡಹುಟ್ಟಿದವರಿದ್ದು ಇವರುಗಳು ವಿವಾದಿತ ಆಸ್ತಿಯನ್ನು ದಿನಾಂಕ: 27-03-2015 ರಂದು ವಿಭಾಗ ಮಾಡಿಕೊಂಡು ಹಂಚಿಕೆ ಮಾಡಿಕೊಂಡಿರುತ್ತಾರೆ. ಈ ದಾಖಲೆ ಲಭ್ಯವಿರುತ್ತದೆ. ಇದರನ್ವಯ ವಾದಿ ಹಾಗೂ ಪ್ರತಿವಾದಿಗಳು ತಾಲೂಕು ಮೋಜಣಿದಾರರಿಗೆ ಅಳತೆ ಹಾಗೂ 11-ಇ ನಕ್ಷೆಗಾಗಿ ಅರ್ಜಿ ಮಾಡಿಕೊಂಡಿದ್ದು ವಿವಾದಿತ ಆಸ್ತಿಯ ತಾಲೂಕಾ ಮೋಜಣಿದಾರರಿಂದ ಅಳತೆ ಮಾಡುತ್ತಾ 11-ಇ ನಕ್ಷೆ ಸಂಖ್ಯೆ 12020415167938001 ರಂತೆ ಅಧಿಕೃತ ನಕ್ಷೆ ಹೊಂದಿರುತ್ತಾರೆ. ನಕ್ಷೆ ಪರಿಶೀಲಿಸಲಾಗಿ ವಾದಿ, ಪ್ರತಿವಾದಿಗಳು ಈ ನಕ್ಷೆಗೆ ಅನುಮೋದನೆ ನೀಡುತ್ತಾ ಸಹಿ ಹಾಕಿರುತ್ತಾರೆ. ಆನಂತರ ಮೇಲಿನ ವಹಿವಾಟಿನಂತೆ ಹಕ್ಕು ಬದಲಾವಣೆಗೆ ಅರ್ಜಿ ದಾಖಲಾಗಿರುತ್ತದೆ. ಆ ತರುವಾಯ ಪ್ರತಿವಾದಿಗಳು ತಮ್ಮ ತಕರಾರು ಇದೆ ಎಂದು ತಕರಾರು ದಾಖಲಿಸಿರುವರು. ತಕರಾರು ಅರ್ಜಿಯನ್ನು ಪರಿಶೀಲಿಸಲಾಗಿ "ಹಕ್ಕು ಬದಲಾವಣೆ ಅರ್ಜಿಗೆ ನಮ್ಮಗಳ ತಕರಾರು ಇರುತ್ತದೆ" ಎಂದು ಉಲ್ಲೇಕಿಸಿರುವರಾದರೂ ಯಾವುದೇ ವಿವರಣೆಯನ್ನು ಒಳಗೊಂಡ ತಕರಾರು ಆಗಿರುವುದಿಲ್ಲ. ಹಾಗೂ ಹುರುಳಿಲ್ಲದ ತಕರಾರು ಎಂದು ಪರಿಗಣಿಸಿದೆ. ಆದ್ದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಅಡವಿ ಕ್ಯಾದಿಗಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 145/1 ವಿಸ್ತೀರ್ಣ 0-60 ರಲ್ಲಿ ಕ್ರಮವಾಗಿ

1) ಜಿ. ವೃಷಭೇಂದ್ರಗೌಡ ತಂದೆ ಕೊಟ್ರಗೌಡ 145/1 ಪೈಕಿ ವಿಸ್ತೀರ್ಣ 00-22
2) ಜಿ. ಸೋಮನಗೌಡ ತಂದೆ ಕೊಟ್ರಗೌಡ 145/1 ಪೈಕಿ ವಿಸ್ತೀರ್ಣ 00-19
3) ಜಿ.ಸಣ್ಣ ಬಸವನಗೌಡ ತಂದೆ ಕೊಟ್ರಗೌಡ 145/1 ಪೈಕಿ ವಿಸ್ತೀರ್ಣ 00-19
ಎಕರೆಯಂತೆ 11-ಇ ನಕ್ಷೆಯನ್ನೊಳಗೊಂಡು ಪಾಲುವಿಭಾಗ ಕರ ತಲಾ 250/- ರಂತೆ ವಾದಿಗಳು 750/- ಸಂದಾಯಿಸಲು ಸೂಚಿಸುತ್ತ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ

ಪ್ರತಿಗಳು :
1) ವಾದಿ + ಪ್ರತಿವಾದಿಗಳು
2) ತಾಲೂಕಾ ಕಛೇರಿ ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ